# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** ದಿನಾಂಕ: 25.11.2010

### ***ಕೆ.ಆರ್. ಮಾರುಕಟ್ಟೆ ವೃತ್ತದಲ್ಲಿ ನಿರ್ಮಿಸುತ್ತಿರುವ ಪಾದಚಾರಿ ಸುರಂಗ ಮಾರ್ಗ ಪರಿಶೀಲನೆ***

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೃಹತ್ ಸಾರ್ವಜನಿಕ ಕಾಮಗಾರಿಗಳ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್. ರವೀಂದ್ರರವರು ಸ್ಥಳೀಯ ಪಾಲಿಕೆ ಸದಸ್ಯರೊಂದಿಗೆ ಕೆ.ಆರ್. ಮಾರುಕಟ್ಟೆಯ ವೃತ್ತದಲ್ಲಿ ನಿರ್ಮಿಸುತ್ತಿರುವ ಪಾದಚಾರಿ ಸುರಂಗ ಮಾರ್ಗ ಕಾಮಗಾರಿಯ ತಪಾಸಣೆಯನ್ನು ಕೈಗೊಂಡು ಪರಿಶೀಲಿಸಿದರು.

ಸುಮಾರು ರೂ. 5.31 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ, ಸದರಿ ಕಾಮಗಾರಿಯು ಪ್ರಾರಂಭಗೊಂಡು ಸುಮಾರು ನಾಲ್ಕು ವರ್ಷಗಳು ಕಳೆದಿದ್ದರೂ ಸಹ ಇನ್ನೂ ಪೂರ್ಣಗೊಂಡಿರುವುದಿಲ್ಲ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆಯಾಗಿರುತ್ತದೆ. ಇದಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪೈಪ್‌ಗಳನ್ನು ಸಕಾಲದಲ್ಲಿ ಸ್ಥಳಾಂತರಿಸದೇ ಇರುವುದೇ ಮುಖ್ಯ ಕಾರಣವೆಂದು ಗುತ್ತಿಗೆದಾರರು ತಿಳಿಸಿರುತ್ತಾರೆ. ಸದರಿ ಪೈಪ್‌ಗಳನ್ನು ಮೂರು ದಿನಗಳೊಳಗಾಗಿ ಸ್ಥಳಾಂತರಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿ, ದಿನಾಂಕ: 28.02.2011 ರೊಳಗಾಗಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿ, ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸುವಂತೆ ಗುತ್ತಿಗೆದಾರರಿಗೆ ಹಾಗೂ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿದರು.

ಮೈಸೂರು ರಸ್ತೆ ಕಡೆಗಿನ ಮೇಲು ಸೇತುವೆಯನ್ನು ದುರಸ್ಥಿಗೊಳಿಸಲು ಒಟ್ಟು 3.15 ಕೋಟಿ ರೂ.ಗಳ ಟೆಂಡರ್ ಅನ್ನು ದಿನಾಂಕ: 07.12.2010 ರಂದು ತೆರೆಯಲಾಗುತ್ತಿದ್ದು, ಸದರಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಹಾಗೂ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳಲ್ಲಿ ವೈಜ್ಞಾನಿಕವಾದ ಡಾಂಬರ್ ಮಿಶ್ರಣ ಹಾಕಿ. ಸ್ಲ್ಯಾಬ್‌ನ ಎರಡು ಬದಿಯಲ್ಲಿ ಸಮತಟ್ಟಾಗಿರುವಂತೆ ನಿರ್ಮಿಸಲು ಅಭಿಯಂತರರಿಗೆ ಸೂಚಿಸಿದರು.

ಕೆ.ಆರ್. ಮಾರುಕಟ್ಟೆಯ ಬಳಿ ಮೈಸೂರು ರಸ್ತೆಯ ಮೇಲು ಸೇತುವೆಯ ಕೆಳಭಾಗದಲ್ಲಿ ನಿರ್ಮಿಸಲಾಗಿರುವ ಅನಧಿಕೃತ ಶೆಡ್‌ನಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದು ತಿಳಿದು ಬಂದಿರುವುದರಿಂದ ಕೂಡಲೇ ಈ ಶೆಡ್ ಅನ್ನು ತೆರವುಗೊಳಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿದರು. ಅಲ್ಲದೇ ಮಾರುಕಟ್ಟೆಯ ಬಂಬೂ ಬಜಾರ್ ಪ್ರದೇಶದಲ್ಲಿ ಪಾಲಿಕೆಗೆ ಸೇರಿದ ಸುಮಾರು ಒಂದು ಕಾಲು ಎಕರೆಯಷ್ಟು ಜಾಗವಿದ್ದು, ಇದು ಸಿ.ಡಿ.ಪಿ.ನಲ್ಲಿಯೂ ಸಹ ದಾಖಲಾಗಿರುತ್ತದೆ. ಈ ಪ್ರದೇಶವನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿಕೊಂಡಿದ್ದು, ಕೂಡಲೇ ಸ್ಥಳವನ್ನು ಪರಿಶೀಲನೆ ಕೈಗೊಂಡು ದಾಖಲೆಗಳನ್ನು ಪರಿಶೀಲಿಸಿ ಸಂಪೂರ್ಣ ವಿವರಗಳನ್ನೊಳಗೊಂಡ ವರದಿಯನ್ನು ಸಲ್ಲಿಸುವಂತೆ ಅಭಿಯಂತರರಿಗೆ ಸೂಚಿಸುತ್ತಾ, ಲಭ್ಯವಾದ ಮಾಹಿತಿಯ ಬಗ್ಗೆ ಮುಂಬರುವ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಪಾಲಿಕೆಯ ಜಾಗವನ್ನು ವಶಪಡಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೆ.ಆರ್. ಮಾರುಕಟ್ಟೆಯ ಬಳಿಯ ತಾಜ್ ಹೋಟೆಲ್ ಹಿಂಭಾಗದ ರಸ್ತೆಯಲ್ಲಿ ಸುಮಾರು 5-6 ಅಂಗಡಿಗಳು ಪಾದಚಾರಿ ರಸ್ತೆಯಲ್ಲಿ ನಿರ್ಮಿಸಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಒತ್ತುವರಿಯಾದ ಈ ಅಂಗಡಿಗಳನ್ನು ತೆರವುಗೊಳಿಸಿ, ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಕಲ್ಪಿಸಿಕೊಡಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿದರು.

ಜೆ.ಸಿ. ರಸ್ತೆಯಲ್ಲಿ ಎರಡೂ ಬದಿಯ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವುದು ಹಾಗೂ ರಸ್ತೆಯ ಉದ್ದಕ್ಕೂ ವಾಹನಗಳನ್ನು ಎರಡೂ ಬದಿಯಲ್ಲಿ ನಿಲ್ಲಿಸಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ಅಡಚಣೆ ಉಂಟಾಗುತ್ತಿದ್ದು ಕೂಡಲೇ ಒತ್ತುವರಿಯನ್ನು ತೆರವುಗೊಳಿಸಿ, ಎರಡೂ ಬದಿಯ ಪಾದಚಾರಿ ರಸ್ತೆಯನ್ನು ಸಮ ಅಳತೆಯಲ್ಲಿ ನಿರ್ಮಿಸಲು ಹಾಗೂ ವಾಹನಗಳನ್ನು ಪಾಲಿಕೆಯ ಬಹುಮಹಡಿ ವಾಹನ ನಿಲುಗಡೆ ಕೇಂದ್ರದಲ್ಲಿ ನಿಲ್ಲಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸುತ್ತಾ, ಬಹುಮಹಡಿ ವಾಹನ ನಿಲುಗಡೆ ಕೇಂದ್ರದ ಕೆಳ ಅಂತಸ್ತಿನಲ್ಲಿ ನೀರು ನಿಂತಿರುವುದರಿಂದ ವಾಹನ ನಿಲಗಡೆಗೆ ಅಡಚಣೆಯುಂಟಾಗುತ್ತಿರುವುದರಿಂದ ಕೂಡಲೇ ಈ ಅವ್ಯವಸ್ಥೆಯನ್ನು ಸರಿಪಡಿಸಿ, ವಾಹನ ನಿಲುಗಡೆಗೆ ಅನುಕೂಲವಾಗುವಂತೆ ಅಗತ್ಯವಿರುವ ದುರಸ್ಥಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಸಿದ್ದ ಪಡಿಸಿ ಸಲ್ಲಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಸದಸ್ಯರುಗಳಾದ ಶ್ರೀ ಎಂ. ಶಿವರಾಜ್, ಶ್ರೀ ಉದಯಶಂಕರ್, ತಿಮ್ಮೇಗೌಡ. ಟಿ, ಶ್ರೀ ಧನರಾಜ್, ಶ್ರೀ ಅಬ್ದುಲ್ ರಖೀಬ್ ಝುಖೀರ್, ಶ್ರೀ ಎಸ್. ಹರೀಶ್ ಮತ್ತು ಪಾಲಿಕೆಯ ಅಧಿಕಾರಿಗಳಾದ ಶ್ರೀ ದೇವರಾಜು, ಮುಖ್ಯ ಅಭಿಯಂತರರು (ಮೂಲಭೂತ ಸೌಕರ್ಯ), ಶ್ರೀ ಬಿ.ಟಿ. ರಮೇಶ್, ಮುಖ್ಯ ಅಭಿಯಂತರರು (ಪಶ್ಚಿಮ), ಶ್ರೀ ಅಬ್ದುಲ್ ನಜೀರ್ , ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**